ಜಯಂತಿಯ ಸಂದರ್ಭದಲ್ಲಿ ಕೊಲ್ಕತಾದ ಸಮೀಪದಲ್ಲಿರುವ ಬೇಲೂರು ಮಠದ ಆವರಣದಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಸುಭಾಷ್‌ಚಂದ್ರ ಬೋಸರು ವಹಿಸಿದ್ದರು. ಆಗ ತಾವು ಮಾಡಿದ ಭಾಷಣದಲ್ಲಿ ಅವರು ಹೀಗೆ ಹೇಳುತ್ತಾರೆ:

"ಸ್ವಾಮಿ ವಿವೇಕಾನಂದರ ಬಹುಮುಖ ಪ್ರತಿಭೆಯನ್ನು ವ್ಯಾಖ್ಯಾನಿಸುವುದು ಬಹಳ ಕಷ್ಟ. ನನ್ನ ಬಾಲ್ಯದ ದಿನಗಳಲ್ಲಿ ವಿದ್ಯಾರ್ಥಿವೃಂದವು ಸ್ವಾಮೀಜಿ ಅವರ ಕೃತಿಗಳು ಮತ್ತು ಭಾಷಣಗಳಿಂದ ಪ್ರಭಾವಿತವಾದಷ್ಟು ಬೇರೆ ಯಾರಿಂದಲೂ ಆಗಿರಲಿಲ್ಲ. ಅವರು ವಿದ್ಯಾರ್ಥಿಗಳ ಆಸೆ-ಆಕಾಂಕ್ಷೆಗಳನ್ನು ಸಂಪೂರ್ಣವಾಗಿ ಅಭಿವ್ಯಕ್ತಿಗೊಳಿಸುತ್ತಿದ್ದರು... ತ್ಯಾಗ ಹಾಗೂ ಚಾರಿತ್ರ್ಯ- ಈ ಎರಡು ತತ್ತ್ವಗಳಿಗೆ ಸ್ವಾಮೀಜಿ ಬಹಳ ಒತ್ತು ಕೊಟ್ಟಿದ್ದರು. ತ್ಯಾಗವಿಲ್ಲದೆ ಏನನ್ನೂ ಸಾಧಿಸಲಾಗದು." (ಉದ್ಬೋಧನ ಮಾಸಪತ್ರಿಕೆ, ವರ್ಷ ೩೩, ಸಂಖ್ಯೆ ೨, ಪು.೭೦.)

೧೯೩೩ರ ಜನವರಿ ೧೩ರಂದು ಬ್ರಿಟಿಷ್ ಸರ್ಕಾರ ಸುಭಾಷರನ್ನು ಬಂಧಿಯಾಗಿರುವಂತೆಯೇ ಭಾರತದಿಂದ ಗಡೀಪಾರು ಮಾಡಿತು. ಆ ಸಮಯದಲ್ಲಿ ಸುಭಾಷರು ಯೂರೋಪಿನ ಆಸ್ಟ್ರಿಯ, ಜರ್ಮನಿ ಮುಂತಾದ ಏಷ್ಯೋ ದೇಶಗಳಲ್ಲಿ ಸುತ್ತಾಡಿದರು. ಹಾಗೂ 'Indian Struggle' ಎಂಬ ತಮ್ಮ ಸುಪ್ರಸಿದ್ಧ ಗ್ರಂಥವನ್ನು ಅದೇ ಸಮಯದಲ್ಲಿ ರಚಿಸಿದರು. ಈ ಗ್ರಂಥದ ಪ್ರಸ್ತಾವನೆಯಲ್ಲಿ ಅವರು ಆಧುನಿಕ ಭಾರತ ನಿರ್ಮಾಣದಲ್ಲಿ ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಪಾತ್ರವನ್ನು ಕುರಿತು ಬಹಳ ಭಾವಪೂರ್ಣವಾಗಿ ಚಿತ್ರಿಸಿದ್ದಾರೆ.

ಸ್ವಾಮಿ ವಿವೇಕಾನಂದರ, **'ಭಾರತಮಾತೆಯೇ ನಮ್ಮ ಜಾಗೃತದೇವತೆ'** ಎಂಬ ವಾಣಿಯು ಸುಭಾಷ್‌ಚಂದ್ರರ ಜೀವನದ ಮೂಲಮಂತ್ರವಾಗಿತ್ತು. ಅವರು ಭಗವತ್ಪ್ರಾಪ್ತಿಗಾಗಿ ಸಂನ್ಯಾಸ ಗ್ರಹಣ ಮಾಡುವ ತಮ್ಮ ಆಕಾಂಕ್ಷೆಯನ್ನು ತ್ಯಜಿಸಿ, ಅದಕ್ಕೆ ಬದಲಾಗಿ ದೇಶಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಬಂಗಾಳದ ಪ್ರಸಿದ್ಧ ಲೇಖಕ ಶ್ರೀ ಮೋಹಿತ್‌ಲಾಲ್ ಮಜುಂದಾರರು ಸುಭಾಷರನ್ನು **'ಸ್ವಾಮಿ ವಿವೇಕಾನಂದರ ಮಾನಸಪುತ್ರ'** ಎಂದೇ ಕರೆದಿದ್ದಾರೆ. ನಿಸ್ಸಂದೇಹವಾಗಿಯೂ ಸುಭಾಷರು ಭಾರತೀಯ ಸ್ವಾತಂತ್ರ್ಯ ಆಂದೋಲನದ ಅಡಿಗಲ್ಲಾಗಿದ್ದರು. ಅದಕ್ಕಾಗಿ ಅವರು ಸಂಪೂರ್ಣವಾಗಿ ಪ್ರೇರಣೆ ಪಡೆದಿದ್ದು ಸ್ವಾಮಿ ವಿವೇಕಾನಂದರಿಂದಲೇ. **(ಆಧಾರ: *'ನೇತಾಜಿ ಸುಭಾಷ್ ಕೇ ಪ್ರೇರಣಾಪುರುಷ್'* ಹಿಂದಿಗ್ರಂಥ; ಲೇಖಕರು: ಸ್ವಾಮಿ ವಿದೇಹಾತ್ಮಾನಂದ)**

---

# ದಿವ್ಯಜೀವನದ ಆದರ್ಶಸೂತ್ರಗಳು

**ಎ**ಲ್ಲ ಹೃದಯಗಳಲ್ಲಿ ಒಂದೇ ಒಂದಾದ ದಿವ್ಯಚೇತನ ಇದೆ. ಈ ಚೇತನವನ್ನು ಜಾಗೃತಗೊಳಿಸಿದರೆ ಮಾತ್ರ ಅನೇಕಮುಖವಾದ ಸಮಾಜದಲ್ಲಿ ಏಕಮೇವತೆಯನ್ನು ತರಬಹುದಾಗಿದೆ. ಏಕೆಂದರೆ ದ್ವಂದ್ವಗಳನ್ನು ಮೀರಿ ನಿಂತದ್ದು ಇದೊಂದೇ. ಸಮಷ್ಟಿಯಾಗಿ ಅರಳುವುದರಲ್ಲಿಯೇ ಸಮಾಜದ ಸಾರ್ಥಕತೆಯಿದೆ. ಇದಕ್ಕಾಗಿಯೇ ಸಮಾಜ ಹುಟ್ಟಿಬಂದಿದ್ದು. ಇದರಿಂದಲೇ ಅದರ ಉಜ್ವಲ ಭವಿತವ್ಯವಿದೆ. ಹಿಟ್ಲರನ ಕೈಯಲ್ಲಿ ಸಮಾಜ ಕೈಗೊಂಬೆಯಾಗಿ ತನ್ನ ಚೇತನ ಕಳೆದುಕೊಂಡಂತೆಯೇ, ನಿರಂಕುಶ ಸ್ವಾತಂತ್ರ್ಯದಲ್ಲಿ ಕೂಡ ಮದ್ಯಪಾನ ಮಾಡಿದ ವ್ಯಕ್ತಿಯಂತೆ ಸಮಾಜದ ಅಹಂಭಾವ ಕೊಬ್ಬುತ್ತದೆ. ಸಮಾಜಪುರುಷ ಭಾರತದಲ್ಲಿ ಕ್ಷಯರೋಗದಿಂದ ಬಳಲುತ್ತಿದ್ದಾನೆ. ಮೊದಲು ಈ ಸಮಾಜಪುರುಷನ ದೇಹದಲ್ಲಿಯೂ ಮನದಲ್ಲಿಯೂ ಆರೋಗ್ಯವನ್ನು ತಂದರೆ ಮಾತ್ರ ಅವನು ಜಗತ್ತಿಗೆ ಧನ್ವಂತರಿಯಾಗಬಲ್ಲ. ಇದೇ ಇಂದಿನ ಮುಖ್ಯ ಕಾರ್ಯ. ಎಂತಹ ನವೀನ ಸಂಸ್ಕೃತಿಯನ್ನು ಭಾರತದಲ್ಲಿ ನಿರ್ಮಿಸಬೇಕು? ಅದರ ನಿಯಮಗಳೇನು? ಭಾರತದ ಉಚ್ಚ ಪರಂಪರೆಯನ್ನು ಆಧುನಿಕ ಜಗತ್ತಿಗೆ ಹೊಂದಿಸಿ ಎರಡನ್ನೂ ದಿವ್ಯಜೀವನದೆಡೆಗೆ ಒಯ್ಯುವ ದಾರಿ ಯಾವುದು? ನರಹರಿಯ ('ಸಮರಸವೇ ಜೀವನ' ಕಾದಂಬರಿಯ ಕಥಾನಾಯಕ) ಸೂತ್ರಗಳಿವು:

೧) ಹೃದ್ದೇಶದಲ್ಲಿ ನೆಲೆಸಿದ ಜ್ಯೋತಿಯಲ್ಲಿ ಎಲ್ಲ ವ್ಯಕ್ತಿಗಳೂ ಒಂದಾಗುತ್ತಾರೆ. ಇನ್ನೊಬ್ಬರ ಬಗ್ಗೆ ವಿಚಾರಮಾಡುವಾಗ ಈ ಹೃದಯ ಪ್ರಾಂತದಲ್ಲಿ ನಿಂತು ವಿಚಾರ ಮಾಡು. ಜಾಗತಿಕ ಐಕ್ಯದ ಉಗಮವೇ ಇಲ್ಲಿದೆ. ೨) ವ್ಯಕ್ತಿತ್ವವೆಂದರೆ ಸಂಘರ್ಷಣದ ಸಾಧನೆಯಲ್ಲ. ಸಾಮರಸ್ಯದ ಮಾಧ್ಯಮವದು. ಏಕಮೇವದ ಸಮೃದ್ಧಿಯನ್ನು ನಿದರ್ಶಿಸಲೆಂದೂ, 'ಅನೇಕ'ದ ಏಕಸೂತ್ರತೆಯನ್ನು ಉದಾಹರಿಸಲೆಂದೂ ಅದರ ಉಗಮವಾಗಿದೆ. ೩) ವ್ಯಕ್ತಿಯ ವ್ಯಕ್ತಿತ್ವದಂತೆ ರಾಷ್ಟ್ರದ ವ್ಯಕ್ತಿತ್ವವೂ ಇದೆ. ಅಂತೆಯೇ ಪ್ರತಿಯೊಂದು ರಾಷ್ಟ್ರವು ಸ್ವತಂತ್ರವಾಗದೆ ಜಗತ್ತು ಸಮೃದ್ಧವಾಗದು. ೪) ಎಲ್ಲ ಭಾಷೆಗಳಿಗೂ ಮತಗಳಿಗೂ ಜಾತಿಗಳಿಗೂ ಧರ್ಮಗಳಿಗೂ ಸ್ಥಾನವಿದೆ. ಆದರೆ ಯಾವ ಭಾಷಾತಿರೇಕಕ್ಕೂ ಜಾತೀಯತೆಗೂ ಧರ್ಮಾಂಧತೆಗೂ ಸ್ಥಾನವಿಲ್ಲ. ೫) ನಿಜವಾದ ಪುರುಷಾರ್ಥಗಳ ಅರಿವು ಯಾವ ನಿಲುಮೆಯಲ್ಲಿಯೂ ಇಲ್ಲ, ಔಚಿತ್ಯವನ್ನು ಅರಿತ ಮನೋಧರ್ಮದಲ್ಲಿದೆ. ಕಿರಿಯ ಆದರ್ಶವನ್ನು ಹಿರಿಯ ಆದರ್ಶವು ಕೊಲ್ಲಲಾರದು. ತನ್ನ ತನ್ನ ಸ್ಥಾನದಲ್ಲಿ ಆಯಾ ಆದರ್ಶವೇ ಚೆನ್ನು. ೬) ಮನುಕುಲ ಒಂದೇ ಕುಲ. ನಿನಗೆ ಒಗ್ಗಿದ ಆಹಾರವನ್ನು ಯಾವ ಕೈಯಿಂದಾದರೂ ಉಣ್ಣು. ಮರಗಳಿತ್ತ ಆಹಾರವನ್ನು ಸ್ವೀಕರಿಸುವಿ. ಮಾನವ ನೀಡಿದುದೇಕೆ ತ್ಯಾಜ್ಯ? ದೇವನ ದೇಗುಲವಾದ ಜಗತ್ತಿನಲ್ಲಿ ಮಡಿ-ಮೈಲಿಗೆಗಳಿಲ್ಲ. ೭) ನಿನ್ನ ಪ್ರಾಪ್ತಿಯ ಅರ್ಧಪಾಲನ್ನು ಸಮಾಜಪುರುಷನಿಗೆ ಕೊಡು. ಇಲ್ಲದಿದ್ದರೆ ನಿನ್ನ ವ್ಯಕ್ತಿತ್ವವು ಪೂರ್ಣವಾಗಲಾರದು. ಸ್ವಾವಲಂಬಿಯಾಗಿ ಸಮಾಜವನ್ನು ಪೋಷಿಸು. ಅದರ ಸಂವರ್ಧನೆಗಾಗಿ ನಿನ್ನನ್ನು ನಿಯಂತ್ರಿಸಿಕೊ. ೮) ಜೀವನಕ್ಕೆ ಚೈತನ್ಯದಾಯಿನಿಯಾದ ಇತಿಹಾಸವನ್ನು ನೆನಪಿಡು; ಪರಂಪರೆಯನ್ನು ಕಾಯ್ದುಕೊಳ್ಳು. ಮಾರಕವಾದುದನ್ನು ಸಮುದ್ರದಲ್ಲಿ ಮುಳುಗಿಸಿಬಿಡು. ೯) ಐಕ್ಯಸಾಧನೆಗಾಗಿ ಜನ್ಮವೆತ್ತಿದ ಎಲ್ಲ ಆಂದೋಲನಗಳನ್ನೂ ಬಲಪಡಿಸು. ಒಡಕಿನ ಮುಳ್ಳುಗಳನ್ನು ಕಿತ್ತೊಗೆ. ದಯೆಯು ಹೃದಯದ ಧರ್ಮ, ನ್ಯಾಯನಿಷ್ಠುರತೆ ಬುದ್ಧಿಯ ಧರ್ಮ. ಈ ಚಂದ್ರ - ಸೂರ್ಯರ ಬೆಳಕಿನಲ್ಲಿ ದಾರಿ ತುಳಿಯುವ ಸಾಧಕನಾಗು.

— **ಡಾ. ವಿ.ಕೃ.ಗೋಕಾಕ್** (ಆಧಾರ: **'ಸಮರಸವೇ ಜೀವನ'** ಕಾದಂಬರಿ) (ಸಂಗ್ರಹ: ಡಾ. ಹೆಚ್. ಪಾಂಡುರಂಗ ವಿಠಲ)



# ‘ಜೀವಸೇವೆಯಲ್ಲಿ ಶಿವಸೇವೆ’

## ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಸೇವಾಕಾರ್ಯಗಳು – ಒಂದು ಪಕ್ಷಿನೋಟ

ಮೈಸೂರು ಶ್ರೀರಾಮಕೃಷ್ಣ ಆಶ್ರಮವು ವಿಶ್ವದಾದ್ಯಂತ ಪ್ರಸಿದ್ಧವಾದ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಒಂದು ಅಂಗಸಂಸ್ಥೆ. ರಾಮಕೃಷ್ಣ ಆಶ್ರಮಗಳಲ್ಲಿ ಎಲ್ಲಾ ಪ್ರಾಂತ್ಯಗಳ, ವರ್ಗಗಳ, ಜಾತಿಗಳ ಮತ್ತು ಭಾಷೆಗಳ ವ್ಯಕ್ತಿಗಳು ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿ ಆತ್ಮೋದ್ಧಾರ ಮತ್ತು ಜನಹಿತ ಕಾರಿ ಸೇವಾಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಒಂದು ವೈಶಿಷ್ಟ್ಯ. ೧೯೨೫ರಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಕಳೆದ ೯೦ ವರ್ಷಗಳಿಂದ ಉದಾತ್ತವಾದ ಆಧ್ಯಾತ್ಮಿಕ, ಸಾಹಿತ್ಯಿಕ, ಶೈಕ್ಷಣಿಕ, ಮತ್ತು ಮಾನವೀಯ ಸೇವಾಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

**೧. ಆಧ್ಯಾತ್ಮಿಕ ಸೇವೆ:** ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಮೈಸೂರು ನಗರದ ಅತ್ಯಂತ ಹಳೆಯ ಧಾರ್ಮಿಕ ಸಂಸ್ಥೆಗಳಲ್ಲಿ ಒಂದು. ಸರ್ವಧರ್ಮಗಳ ಸಮನ್ವಯಾಚಾರ್ಯರಾದ ಶ್ರೀರಾಮಕೃಷ್ಣರಿಗೆ ಮುಡುಪಾದ ವಿಶ್ವಭಾವೈಕ್ಯ ದೇವಾಲಯವೇ ಈ ಆಶ್ರಮದ ಮುಖ್ಯ ಕೇಂದ್ರಬಿಂದು. ಸರ್ವಧರ್ಮ ಸಮಭಾವಕ್ಕೆ, ಜಾತ್ಯತೀತ ಮತ್ತು ಪಂಥಾತೀತ ಸಮುದಾಯಕ್ಕೆ ಉಜ್ವಲ ನಿದರ್ಶನ ರಾಮಕೃಷ್ಣ ಆಶ್ರಮ. ದಿನನಿತ್ಯದ ಪೂಜೆ, ಸಂಜೆಯ ಆರತಿ, ವಾರಕ್ಕೆ ನಾಲ್ಕು ದಿನಗಳ ಕಾಲ ನಡೆಯುವ ಧಾರ್ಮಿಕ ಪ್ರವಚನಗಳು, ಆಧ್ಯಾತ್ಮಿಕ ಶಿಬಿರಗಳು, ಯುವಕರಿಗೆ ವಿವೇಕಾನಂದ ಯುವಚೇತನ ಕೇಂದ್ರ – ಹೀಗೆ ಹಲವಾರು ಆಧ್ಯಾತ್ಮಿಕ ಚಟುವಟಿಕೆಗಳನ್ನು ಆಶ್ರಮವು ನಡೆಸಿಕೊಂಡು ಬರುತ್ತಿದೆ. ಈ ಕಾರ್ಯಕ್ರಮಗಳಲ್ಲಿ ಜಾತಿ ಮತ ಭೇದವಿಲ್ಲದೆ ಎಲ್ಲರೂ ಪಾಲ್ಗೊಳ್ಳಬಹುದು. ಅಲ್ಲದೆ, ಎಲ್ಲ ಧರ್ಮಗಳಿಗೆ ಸೇರಿದ ಸಾಧುಸಂತರನ್ನೂ ಇಲ್ಲಿ ಗೌರವಿಸಲಾಗುತ್ತಿದೆ. ಶ್ರೀಶಂಕರಾಚಾರ್ಯ, ಶ್ರೀರಾಮಾನುಜಾಚಾರ್ಯ, ಶ್ರೀಮಧ್ವಾಚಾರ್ಯ, ಭಗವಾನ್ ಬುದ್ಧ, ಶ್ರೀಚೈತನ್ಯ, ಶ್ರೀಬಸವಣ್ಣನವರು ಮತ್ತು ಏಸುಕ್ರಿಸ್ತರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಹಚ್ಚಹಸಿರಿನಿಂದ ಕೂಡಿದ ಆಶ್ರಮದ ವಾತಾವರಣವು ಆಧ್ಯಾತ್ಮಿಕತೆಯಿಂದ ಕೂಡಿದ್ದು, ಮನಸ್ಸಿಗೆ ಶಾಂತಿ ನೆಮ್ಮದಿಗಳನ್ನು ನೀಡುತ್ತದೆ. ಇಲ್ಲಿ ಕಂಗೊಳಿಸುವ ಸುಂದರ ಉದ್ಯಾನವನವು ಮೈಸೂರಿನಲ್ಲಿಯೇ ಹೆಸರುವಾಸಿಯಾಗಿದೆ.

**೨. ಸಾಹಿತ್ಯಿಕ ಸೇವೆ:** ಕರ್ನಾಟಕದ ಅತ್ಯಂತ ಹಳೆಯ ಪ್ರಕಟನ ಕೇಂದ್ರಗಳಲ್ಲಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವೂ ಒಂದು. ಆಶ್ರಮವು ೮೦ಕ್ಕೂ ಹೆಚ್ಚು ವರ್ಷಗಳಿಂದ ಹಲವಾರು ಮೌಲ್ಯಯುತ ಪುಸ್ತಕಗಳನ್ನು ಪ್ರಕಟಿಸುತ್ತ ಬಂದಿದೆ. ಇದುವರೆಗೆ ಸುಮಾರು ೩೭೦ ಪುಸ್ತಕಗಳನ್ನು ಕನ್ನಡ ಭಾಷೆಯಲ್ಲಿ ಪ್ರಕಟಿಸಲಾಗಿದೆ. ಕನ್ನಡ ಸಾಹಿತ್ಯದ ದಿಗ್ಗಜರಾದ ಪೂಜ್ಯ ಶ್ರೀ ಡಿ.ವಿ.ಜಿ.ಯವರು ಆಶ್ರಮದ ಪುಸ್ತಕ ಪ್ರಕಟಣಾಕಾರ್ಯವನ್ನು ಮನದುಂಬಿ ಪ್ರಶಂಸಿಸಿದ್ದಾರೆ. ಕನ್ನಡತಾಯಿಯ ಸೇವೆಗೆ ಪಣತೊಟ್ಟ ಹಲವಾರು ಸಾಹಿತಿಗಳು ರಾಮಕೃಷ್ಣ–ವಿವೇಕಾನಂದ ಸಾಹಿತ್ಯದಿಂದ ಪ್ರೇರಣೆ ಪಡೆದಿದ್ದಾರೆ. ಅಂಥವರಲ್ಲಿ ಶ್ರೀಯುತರಾದ ಡಿ.ವಿ.ಜಿ., ಟಿ.ಎಸ್. ವೆಂಕಣ್ಣಯ್ಯ, ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ, ವಿ.ಕೃ.ಗೋಕಾಕ್, ಆರ್. ಆರ್. ದಿವಾಕರ್, ದ. ರಾ. ಬೇಂದ್ರೆ, ದೇಜಗೌ, ಶ್ರೀ ತ.ಸು. ಶಾಮರಾವ್, ಕೋ.ಚೆನ್ನಬಸಪ್ಪ, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಸಿ.ಪಿ.ಕೆ., ಡಾ. ಪ್ರಭುಶಂಕರ, ಎಚ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ನಿಸಾರ್ ಅಹಮದ್ ಮುಂತಾದವರು ಮುಖ್ಯರು. ಆಶ್ರಮವು ಕನ್ನಡ ಸಾಹಿತ್ಯಕ್ಷೇತ್ರಕ್ಕೆ ನೀಡಿರುವ ಕಾಣಿಕೆ ಐತಿಹಾಸಿಕವಾದದ್ದು, ಅಭೂತಪೂರ್ವವಾದದ್ದು. ಮೇರುಕವಿಗಳಾದ ಕುವೆಂಪುರವರು ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಸುಮಾರು ಹದಿಮೂರು ವರ್ಷಗಳ ಕಾಲ ನೆಲೆಸಿದ್ದರು; ರಾಮಕೃಷ್ಣ ಆಶ್ರಮವೆಂದರೆ ಅವರಿಗೆ ಜೀವನದುದ್ದಕ್ಕೂ ಪಂಚಪ್ರಾಣವಾಗಿತ್ತು.

**‘ವಿವೇಕಪ್ರಭ’ ಪತ್ರಿಕೆ :** ಕರ್ನಾಟಕದ ಜನತೆಗೆ ಮೈಸೂರು ಶ್ರೀರಾಮಕೃಷ್ಣ ಆಶ್ರಮ ಸಲ್ಲಿಸುತ್ತಿರುವ ಅತಿ ದೊಡ್ಡ ಕನ್ನಡ ಸಾಹಿತ್ಯ ಸೇವೆಯೆಂದರೆ ‘ವಿವೇಕಪ್ರಭ’ ಮಾಸಪತ್ರಿಕೆಯ ಪ್ರಕಾಶನ ಮತ್ತು ಪ್ರಸರಣ. ಕೇವಲ ಆಧ್ಯಾತ್ಮಿಕ ವಿಷಯಗಳಲ್ಲದೆ, ನೈತಿಕ, ಸಾಮಾಜಿಕ, ಆರ್ಥಿಕ, ಕೌಟುಂಬಿಕ ಮುಂತಾದ ದಿನನಿತ್ಯ ಜೀವನದ ಅನೇಕ ಕಳಕಳಿಯ ವಿಷಯಗಳನ್ನು ಕೂಡ ಇದರಲ್ಲಿ ಪ್ರಕಟಿಸಲಾಗುತ್ತಿದೆ. ೨೦೦೦ ಜನವರಿಯಲ್ಲಿ ಆರಂಭವಾದ ಈ ಪತ್ರಿಕೆ ಪೂರ್ಣ ವರ್ಣರಂಜಿತವಾಗಿದ್ದು, ಪ್ರತಿ ವರ್ಷ ಜನವರಿಯಲ್ಲಿ ವಿವಿಧ ವಿಷಯಗಳ ಬಗ್ಗೆ ವಿಶೇಷ ಸಂಚಿಕೆಯನ್ನೂ ಹೊರತರುತ್ತಿದೆ. ಸುಮಾರು ೨೭,೦೦೦ ಪ್ರತಿಗಳು ಪ್ರತಿ ತಿಂಗಳೂ ನಾಡಿನಾದ್ಯಂತ ಪ್ರಸರಣಗೊಳ್ಳುತ್ತಿವೆ.

**೩. ಶೈಕ್ಷಣಿಕ ಸೇವೆ :** ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು **ಶ್ರೀರಾಮಕೃಷ್ಣ ವಿದ್ಯಾಶಾಲೆ** ಮತ್ತು **ರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ** ಎಂಬ ಎರಡು ಬೃಹತ್ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯು ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದಿರುವ ಒಂದು ಮಹತ್ವದ ಮೌಲ್ಯಶಿಕ್ಷಣ ಕೇಂದ್ರ. ಎರಡೂ ಸಂಸ್ಥೆಗಳಲ್ಲಿ ಆಧ್ಯಾತ್ಮಿಕ ಹಾಗೂ ನೈತಿಕ ಶಿಕ್ಷಣ ಮತ್ತು ಸಮಗ್ರ ವ್ಯಕ್ತಿತ್ವ